ಉಪಾಧ್ಯಕ್ಷರು:– ಆಯಿತು, ಮುಂದಿನ ವಾರ ತರಿಸೋಣ.

ಶ್ರೀ ಶಿವಾನಂದ ಪಾಟೀಲ್ ಎಸ್:– ಯಾವಾಗ ಎಂದು ಡೇಟ್ ಹೇಳಿ ಸಾರ್. ಮುಂದಿನ ವಾರ, ಮುಂದಿನ ವಾರ ಎಂದರೆ ಯಾವಾಗ ಸಾರ್?

ಉಪಾಧ್ಯಕ್ಷರು:– ಆಯಿತು ನೀವು ಮತ್ತೆ ಬರೆದು ಕೊಡಿ. ಮಾಡೋಣ.

ಗಮನ ಸೆಳೆಯುವ ಸೂಚನೆಗಳು:–

ಶ್ರೀ ಸಿ.ಎಂ.ಉದಾಸಿ:– ಸನ್ಮಾನ್ಯ ಉಪಾಧ್ಯಕ್ಷರೆ;

ಉಪಾಧ್ಯಕ್ಷರು: ಮಾನ್ಯ ಉದಾಸಿಯವರೇ, ಒಂದು ನಿಮಿಷ ಇರಿ.

ಶ್ರೀ ಎಂ.ಶ್ರೀರಾಮುಲು:– ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಎಪಿಎಂಸಿ ಚುನಾವಣೆಯಲ್ಲಿ ಮೊನ್ನೆ ಗೋಣೂರು ಗ್ರಾಮದಲ್ಲಿ ರೈತರ ಚುನಾವಣೆಯಲ್ಲಿ ಸಿಪಿಐ ರಾಮರಾವ್ ಎನ್ನುವವರು ಹತಾಷರಾಗಿ ರೈತರ ಮೇಲೆ ಹಲ್ಲೆ ಮಾಡಿದರು. ಹಲ್ಲೆ ಮಾಡಿ ಫೈರಿಂಗ್ ಮಾಡಿದರು. 8 ಮಂದಿ ಸಾವು ಬದುಕಿನ ಜೊತೆ ಹೋರಾಟ ನಡೆಸುತ್ತಿದ್ದಾರೆ. ಆ ಪೈಕಿ ಇಬ್ಬರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 8 ಮಂದಿ ಬಳ್ಳಾರಿಯಲ್ಲಿ...

ಉಪಾಧ್ಯಕ್ಷರು:– ಮಾನ್ಯ ಶ್ರೀರಾಮುಲು ಅವರೇ ಈ ಸಬ್ಜೆಕ್ಟ್ ಈಗ ಇಲ್ಲ. ನಾಳೆಗೆ ಪ್ರಸ್ತಾಪ ಮಾಡಿ, ನಾಳೆ ಮಾತನಾಡಿ. ಈಗ ನೀರಾವರಿ ಬಗ್ಗೆ ಮಾನ್ಯ ಉದಾಸಿ ಅವರ ಕಾಲ್ ಅಟೆನ್ಷನ್ ಇದೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: ಹಾನಗಲ್ ತಾಲೂಕಿನಲ್ಲಿ ವರದಾ ನದಿಗೆ ಅಣೆಕಟ್ಟು ಕಟ್ಟುತ್ತಿರುವುದರಿಂದ ಸಾವಿರಾರು ಜನ ನಿರಾಶ್ರಿತರಾಗುವ ಹಾಗೂ ಕೃಷಿ ಜಮೀನು ಮುಳುಗಡೆಯಾಗುವ ಬಗ್ಗೆ

ಶ್ರೀ ಸಿ.ಎಂ.ಉದಾಸಿ:– ಮಾನ್ಯ ಉಪಾಧ್ಯಕ್ಷರೆ, ಹಾನಗಲ್ ತಾಲೂಕಿನಲ್ಲಿ ವರದಾ ನದಿಗೆ ಅಣೆಕಟ್ಟು ಕಟ್ಟುತ್ತಿರುವುದರಿಂದ ಸಾವಿರಾರು ಜನ ನಿರಾಶ್ರಿತರಾಗುವ ಹಾಗೂ ಕೃಷಿ ಜಮೀನು ಮುಳುಗಡೆಯಾಗುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಹಾಗೂ

ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ವಿಧಾನಸಭಾ ಸದಸ್ಯರಾದ ಶ್ರೀ ಸಿ.ಎಂ.ಉದಾಸಿ ಇವರು ಮಂಡಿಸಿರುವ ನಿಯಮ 73 ರಡಿಯಲ್ಲಿ ಗಮನಸೆಳೆಯುವ ಸೂಚನೆ ಸಂಖ್ಯೆ 222ಕ್ಕೆ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಹೇಳಿಕೆ.

ಹಾನಗಲ್ ತಾಲೂಕಿನಲ್ಲಿ ಹರಿಯುತ್ತಿರುವ ವರದಾ ನದಿಗೆ ಅಣೆಕಟ್ಟು ನಿರ್ಮಿಸಲು ಸ್ಕೀಂ 'ಎ' ಅಡಿಯಲ್ಲಿ ಕೃಷ್ಣಾ ನದಿಯ ನೀರನ್ನು ಹಂಚಿಕೆ ಮಾಡಲಾಗಿರುವುದಿಲ್ಲ ಉದ್ದೇಶಿತ ಸ್ಕೀಂ 'ಬಿ' ಅಡಿಯಲ್ಲಿ ವರದಾ ನದಿಯಲ್ಲಿ 20 ಟಿಎಂಸಿ ನೀರನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಬ್ಯಾತನಾಳ ಗ್ರಾಮದ ಬಳಿ ಸಮತೋಲನಾ ಜಲಾಶಯ ನಿರ್ಮಿಸಲು ಹಾಗೂ ಏತ ನೀರಾವರಿ ವ್ಯವಸ್ಥೆಯಿಂದ ಶಿರಹಟ್ಟಿ, ಶಿಗ್ಗಾಂವ್, ಬ್ಯಾಡಗಿ, ಹಿರೇಕೆರೂರು, ಹಾನಗಲ್, ಸವಣೂರು, ಶಿಕಾರಿಪುರ ಮತ್ತು ಹಾವೇರಿ ತಾಲೂಕುಗಳ ಒಟ್ಟು 161 ಗ್ರಾಮಗಳ 1,94,615 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆಯೆಂದು ರೇಖಾ ಅಂದಾಜು ಮಾಡಲಾಗಿರುತ್ತದೆ.

ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ಕ್ರಮ ಜರುಗಿಸಲಾಗಿದ್ದು, ಪೂರ್ಣ ಪ್ರಮಾಣದ ಯೋಜನಾ ವರದಿ ತಯಾರಿಕೆ ನಂತರ ಯೋಜನೆಯ ಸ್ಪಷ್ಟ ಚಿತ್ರಣ ಲಭ್ಯವಾಗುತ್ತದೆ. ಕೃಷ್ಣ ಜಲ ವಿವಾದ ಮಂಡಳಿಯು ರಾಜ್ಯಕ್ಕೆ ನೀರಿನ ಹಂಚಿಕೆ ಮಾಡಿದ ನಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು):–

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರ ಗಮನಕ್ಕೆ ನಾನು ತರಬಯಸುವುದೇನೆಂದರೆ, ರಾಜ್ಯದಲ್ಲಿ ಎಲ್ಲಿಯಾದರೂ ಸಹ ಇಂತಹ ಒಂದು ಯೋಜನೆ ಜಾರಿಯಾಗಿದೆಯೇ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಮೂವತ್ತು ಹಳ್ಳಿಗಳನ್ನು ಮುಳುಗಿಸಿ ಸುಮಾರು 25 ಸಾವಿರದಿಂದ 30 ಸಾವಿರ ಎಕರೆಗಳಷ್ಟು ಫಲವತ್ತಾದ ಜಮೀನನ್ನು ಮುಳುಗಿಸಿ ಅಲ್ಲೊಂದು ಅಣೆಕಟ್ಟನ್ನು ಕಟ್ಟುವುದರಿಂದ ಮೂವತ್ತು ಸಾವಿರಕ್ಕಿಂತಲೂ ಹೆಚ್ಚು ಜನರು ನಿರಾಶ್ರಿತರಾಗುತ್ತಿರುವಂಥ ಈ ಪ್ರದೇಶದಲ್ಲಿ 1,52,915 ಎಕರೆಗೆ ಲಿಫ್ಟ್ ಇರಿಗೇಶನ್ ಮಾಡುವುದೆಂದರೆ, ಒಂದು ಅಣೆಕಟ್ಟು ಕಟ್ಟಿ ಅಲ್ಲಿಂದ 84 ಕಿಲೋ ಮೀಟರ್‌ಗಳಷ್ಟು ನದಿಯಲ್ಲಿ ನೀರು ಹರಿಯುವುದಕ್ಕೆ ಬಿಟ್ಟು 74,850 ಹೆಚ್‌ಪಿಯಷ್ಟು ಮೋಟಾರನ್ನು ಕೂರಿಸಬೇಕು. ಇಷ್ಟು ಹೆಚ್‌ಪಿ ಸಾಮರ್ಥ್ಯದ ಮೋಟಾರನ್ನು ಕೂರಿಸಿ ಲಿಫ್ಟ್ ಮಾಡಿದಂಥ ನೀರನ್ನು ಏಳು ಕಿಲೋ ಮೀಟರ್‌ಗಳವರೆಗೆ ರೈಸಿಂಗ್ ಮೇನಲ್ಲಿ ಒಂದು ಕಡೆಯಲ್ಲಿ ತೆಗೆದುಕೊಂಡು ಹೋಗಿ, ಮತ್ತೊಂದು ಕಡೆ 14 ಕಿಲೋ ಮೀಟರ್ ರೈಸಿಂಗ್ ಮೇನಲ್ಲಿ ನೀರು ತೆಗೆದುಕೊಂಡು ಹೋಗಿ ಅಲ್ಲಿಂದ ಕಾಲುವೆಗಳ ಮುಖಾಂತರ ನೀರು ಹರಿಸುವ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಎಲ್ಲಿಯೂ ಮಾಡುವುದಕ್ಕಾಗಲ್ಲ, ಇಡೀ ರಾಷ್ಟ್ರದಲ್ಲಿಯೇ ಇಂತಹ

ಯೋಜನೆಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆತಂಕದ ವಿಷಯವೇನೆಂದರೆ, ಇವೊತ್ತು 437 ಯೋಜನೆಗಳು ರಾಜ್ಯದಲ್ಲಿದ್ದರೆ, ಅದರಲ್ಲಿ ಶೇಕಡ 25 ಸಹ ಕಾರ್ಯಗತ ಮಾಡುತ್ತಿಲ್ಲ. ಯಾವುದೆಂದರೆ, 500 ಹೆಚ್‌ಪಿ, ಇಲ್ಲಿ ಬೇಕಾಗಿರುವುದು 43 ಪಂಪ್‌ಸೆಟ್‌ಗಳಿಗೆ 1500 ಹೆಚ್‌ಪಿ ಬೇಕಾಗುತ್ತದೆ. ಮತ್ತೊಂದು ಕಡೆ 8 ಪಂಪ್‌ಸೆಟುಗಳಿಗೆ 1500 ಹೆಚ್‌ಪಿ ಬೇಕಾಗುತ್ತದೆ. ಸುಮಾರು 54 ಪಂಪುಸೆಟ್ ಗಳಿಗೆ 1500 ಹೆಚ್‌ಪಿ ಬೇಕಾಗುತ್ತದೆ. ಸುಮಾರು 54 ಪಂಪು ಸೆಟ್ಟುಗಳಿಗೆ 1500 ಹೆಚ್.ಪಿ. ಕೂರಿಸಿ ನೀರಾವರಿ ಮಾಡುವುದರಿಂದ 30 ಹಳ್ಳಿಗಳನ್ನು ಮುಳುಗಿಸುವುದರಿಂದ 30 ಸಾವಿರ ಎಕರೆಗಳಷ್ಟು ಪ್ರದೇಶ ಮುಳುಗಿಸಿ ಅಲ್ಲಿ 10 ಸಾವಿರ ಎಕರೆಗಳಿಗಷ್ಟೇ ನೀರಾವರಿ ಮಾಡುವುದಾದರೆ ಏನು ಪ್ರಯೋಜನವಾದೀತು ಎನ್ನುವ ಪ್ರಶ್ನೆ ಎದುರಿಗೆ ಇದು 1 ಲಕ್ಷ 59 ಸಾವಿರ ಎಕರೆಗೆ ನೀರಾವರಿ ಮಾಡುವುದಿರಲಿ, 2 ಲಕ್ಷ ಎಕರೆಗೂ ನೀರಾವರಿ ಮಾಡುವುದಕ್ಕೆ ಸಾಧ್ಯವಿಲ್ಲ, ಇದು ಊರನ್ನು ಮುಳುಗಿಸುವ ಕಾರ್ಯಕ್ರಮವಾಗುತ್ತಿರುವುದರಿಂದ ಈಗಾಗಲೇ ಇದಕ್ಕೆ 57 ಲಕ್ಷ ರೂಪಾಯಿಗಳಷ್ಟು ಹಣ ಸರ್ವೆ ಕಾರ್ಯಕ್ಕೆ ಬಿಡುಗಡೆಯಾಗಿದೆಯೆಂದು ತಿಳಿದುಬರುತ್ತದೆ. ಈ ಯೋಜನೆಯ ಕಾರ್ಯಗತವಾಗುವುದಿಲ್ಲವೆಂದು ಮೇಲ್ನೋಟಕ್ಕೆ ಕಾಣುತ್ತಿರಬೇಕಾದರೆ, ಇದನ್ನು ಕೈಬಿಡಬೇಕೆಂಬ ಒತ್ತಾಯ ನಮ್ಮದಾಗಿದೆ. ಹಾನಗಲ್ ತಾಲೂಕಿನಲ್ಲಿ ಎಂಟು ಹಳ್ಳಿಗಳು, ಸೊರಬ ತಾಲೂಕಿನಲ್ಲಿ 17 ಹಳ್ಳಿಗಳು ಮುಳುಗುತ್ತಿರಬೇಕಾದರೆ, ಯಾವುದೇ ಕಾರಣಕ್ಕೂ ಸಹ ಅಲ್ಲಿ ಫಲವತ್ತಾದ 30 ಸಾವಿರ ಎಕರೆಗಳಷ್ಟು ಫಲವತ್ತಾದ ಜಮೀನನ್ನು ಕಳೆಯುವುದಾಗಲಿ, 30 ಸಾವಿರ ಜನರನ್ನು ನಿರಾಶ್ರಿತ ಮಾಡುವಂಥ ಯೋಜನೆಯನ್ನು ಕೈಬಿಡಬೇಕೆನ್ನುವುದನ್ನು ಮತ್ತು ಯಾವುದು ವಯಬಲ್ ಆಗಿಲ್ಲವೋ, ಅಂತಹುದನ್ನು ಮಾಡಬಾರದೆಂದು ಸನ್ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಉಪಾಧ್ಯಕ್ಷರೆ, ನಾವು ಮತ್ತು ಮಾನ್ಯ ಹಿರಿಯ ಸದಸ್ಯರಾದ ಸಿ.ಎಂ.ಉದಾಸಿಯವರೂ ಕೂಡ ನಮ್ಮ ತಾಲೂಕಿನ ರೈತರ ಹಿತ ದೃಷ್ಟಿಯಿಂದ ಇದನ್ನು ಗಮನ ಸೆಳೆಯುವ ಸೂಚನೆ ಮುಖಾಂತರ ಸಚಿವರ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಈಗ ಬ್ಯಾತನಾಳ ಏತ ನೀರಾವರಿಗೆ 'ಎ' ಸ್ಕೀಮ್‌ನಲ್ಲಿ ಮಾಡಿರುವ ನೀರಾವರಿ ಯೋಜನೆಗಳನ್ನು ಮುಳುಗಡೆ

ಮಾಡಿ, 'ಬಿ' ಸ್ಕೀಮ್‌ನಲ್ಲಿ ನಾವು ನೀರಾವರಿ ಮಾಡುತ್ತೇವೆ ಅನ್ನತಕ್ಕಂಥಾದ್ದು ಸೂಕ್ತವಾದ ಕಾರ್ಯಕ್ರಮವಲ್ಲ. 'ಎ' ಸ್ಕೀಮ್‌ನಲ್ಲಿ ಮಾಡಿರುವ ನೀರಾವರಿ ಯೋಜನೆಗಳು ಈಗಾಗಲೇ ನೀರಾವರಿ ಮಾಡುತ್ತಿರತಕ್ಕಂಥವು. ಅವುಗಳನ್ನೆಲ್ಲಾ ಮಾಡತಕ್ಕಂಥ ಉದ್ದೇಶ ಏನಾಗುತ್ತದೆ? 'ಬಿ' ಸ್ಕೀಮ್‌ನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳ ಬೇಕೆಂದರೆ, ಹತ್ತು ಹಲವಾರು ಕಾರ್ಯಕ್ರಮಗಳು ಬೇರೆ ರೀತಿಯಲ್ಲಿವೆ. ಒಂದು ವೇಳೆ ಏನಾದರೂ ಆ ರೀತಿ ಮಾಡಬೇಕೆನ್ನುವುದು ಅಲ್ಲಿ ಮುಂದಿರುವ ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವುದಾದರೆ, ಡೈವರ್ಶನ್ ಚಾನೆಲ್ಸ್ ಇವೆ. ಆದರೆ ಹಿಂದುಗಡೆ ಮುಳುಗಡೆ ಮಾಡಿಕೊಂಡು 30 ಸಾವಿರ ನೀರಾವರಿ ಭೂಮಿಯನ್ನು ಮುಳುಗಡೆ ಮಾಡಿ ಸುಮಾರು ಏನಿಲ್ಲವೆಂದರೂ 25ರಿಂದ 30ಸಾವಿರ ಜನರು ಇವ್ಹೊತ್ತು ನಿರ್ಗತಿಕರಾಗುತ್ತಾರೆ. ಇದರಿಂದ ಯಾರಿಗೆ ಅನುಕೂಲವಾಗುತ್ತದೆ ಎನ್ನವುದನ್ನು ಕೂಡ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು 'ಬಿ' ಸ್ಕೀಮ್‌ನಲ್ಲಿ ಇನ್ನು ಹತ್ತು ವರ್ಷಕ್ಕೆ ಬರಬಹುದು, ಹದಿನೈದು ವರ್ಷಕ್ಕೆ ಬರಬಹುದು. ಆದರೆ, ಇಲ್ಲಿ ತಾವು ಏನು ಹೇಳಿಕೆ ಕೊಟ್ಟಿದ್ದೀರಿ, ಇದನ್ನು ಮುಂದಕ್ಕೆ ಅನುಷ್ಟಾನಗೊಳಿಸ ಲಾಗುವುದು ಎಂಬುದಕ್ಕೆ ನಮ್ಮ ತಾಲೂಕಿನಿಂದ ನಮ್ಮ ರೈತರ ಪರವಾಗಿ ಇದಕ್ಕೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಬೇಕಾಗುತ್ತದೆ. ಏಕೆಂದರೆ, ಇದು ಯಾವುದೋ ಒಂದು ನೀರಾವರಿ ಯೋಜನೆಗೆ ವಿರೋಧವಾಗಿರತಕ್ಕ ಮಾತುಗಳಲ್ಲ, ಎಷ್ಟೋ ತಲಾತಲಾಂತರಗಳಿಂದ ಬಂದಿರುವ ಇಲ್ಲಿರುವ ರೈತರು ಹೊಳೆಯ ಎಡ ಬಲಗಳಲ್ಲಿ ಬಹಳ ಫಲವತ್ತಾಗಿರುವ ಭೂಮಿಗೆ ಸಂಪೂರ್ಣವಾಗಿ ನೀರಾವರಿ ಮಾಡಿಕೊಡುವ ಉದ್ದೇಶವಾಗಬೇಕೇ ಹೊರತು ಅದನ್ನು ಮುಳುಗಡೆ ಮಾಡಿ, ಮತ್ತೆಲ್ಲಿಯೋ ಹೋಗಿ ನೀರಾವರಿ ಮಾಡುವುದಕ್ಕೆ ಇದು ಸೂಕ್ತವಾದ ಕಾರ್ಯಕ್ರಮವಾಗುವುದಿಲ್ಲ. ಇದರ ಬಗ್ಗೆ ನಾನು ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ರೈತರಿಗೆ ಸಂಪೂರ್ಣ ವಿರೋಧವಾಗತಕ್ಕಂಥ ಕಾರ್ಯಕ್ರಮವಾಗುತ್ತದೆ. ಎಲ್ಲಿಯೋ ಸ್ವಲ್ಪ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೋಗಿ ಮತ್ತೊಂದು ಕಡೆ ಇರುವ ರೈತರನ್ನು ಮುಳುಗಡೆ ಮಾಡುವಂತಾಗುತ್ತದೆ. ಹಾಗಾಗಿ, ದಯಮಾಡಿ ಈ ಕಾಮಗಾರಿಯನ್ನು ಅಥವಾ ಈ ಯೋಜನೆಯನ್ನು ದಯಮಾಡಿ ತಾವು ಕೈ ಬಿಡಬೇಕಾಗುತ್ತದೆ. ಮುಂದಕ್ಕೆ ಎಲ್ಲಿಯೇ ಆದರೂ ಕೂಡ 'ಬಿ' ಸ್ಕೀಮ್‌ಗೆ ಬೇಕಾಗಿರತಕ್ಕ ನೀರಾವರಿ ಯೋಜನೆಗಳು ಬೇಕಾದಷ್ಟಿವೆ. ಅದನ್ನು ನಾವು ಮುಂದೆ ತೆಗೆದುಕೊಂಡು ಹೋಗುವುದಕ್ಕೂ ಕೂಡ ಸಾಧ್ಯವಾಗುತ್ತದೆ.

ಶ್ರೀ ಸಿ.ಎಂ.ಉದಾಸಿ: ತಾವು ಇದಕ್ಕೆ ನೀರಾವರಿಯನ್ನೇ ಮಾಡಬೇಕೆಂಬ ಉದ್ದೇಶ ಇದ್ದರೆ, ಸಣ್ಣ ನೀರಾವರಿಯನ್ನು ಇವ್ಹೊತ್ತು ನದಿ ದಂಡೆಗುಂಟ ಬೇಕಾದಷ್ಟು

ಮಾಡುವುದಕ್ಕೆ ಸಾಧ್ಯವಿದೆ. 10–20 ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಜೊತೆಗೆ ಇವೊತ್ತು 13 ಬ್ಯಾರೇಜುಗಳಿವೆ. ಆ 13 ಬ್ಯಾರೇಜುಗಳ ಮಧ್ಯೆ ಇನ್ನೂ 12 ಬ್ಯಾರೇಜುಗಳನ್ನು ನಿರ್ಮಾಣ ಮಾಡುವುದಕ್ಕೂ ಸಾಧ್ಯವಿದೆ. ಈ ಬ್ಯಾರೇಜುಗಳನ್ನು ನಿರ್ಮಾಣ ಮಾಡುವುದರಿಂದ ಅನೇಕ ಜನರಿಗೆ ಅನುಕೂಲ ವಾಗುತ್ತದೆ. ಆ ಕಾರಣಕ್ಕಾಗಿ ಈ ಯೋಜನೆಯನ್ನು ಕೈಬಿಡಬೇಕೆಂದು ತಮಗೆ **ಒತ್ತಾಯ ಮಾಡುತ್ತಿದ್ದೇವೆ. ಇದಕ್ಕೆ ತಮ್ಮಿಂದ ಉತ್ತರ ನಿರೀಕ್ಷಿಸುತ್ತಿದ್ದೇವೆ.**

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾನು ಹೇಳಿಕೆ ಕೊಟ್ಟಿದ್ದೇನೆ. ಇದು 'ಬಿ' ಸ್ಕೀಮ್‌ನಲ್ಲಿ ಬರತಕ್ಕಂಥ ಯೋಜನೆ. ಇದಕ್ಕೆ 20 ಟಿಎಂಸಿ ನೀರನ್ನು 'ಬಿ' ಸ್ಕೀಮ್‌ನಲ್ಲಿ ಅಲೊಕೇಶನ್ ಮಾಡಬೇಕೆಂದು ಟ್ರಿಬ್ಯೂನಲ್ ಮುಂದೆ ಈಗಾಗಲೇ ಹೋಗಿದೆ. ಆದರೆ, ಮುಳುಗಡೆಯಾಗದ ರೀತಿಯಲ್ಲಿ 20 ಟಿಎಂಸಿ ನೀರನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಬೇಕಾದರೆ ಈಗೇನು ಸರ್ವೆ ಮಾಡುತ್ತಿದ್ದಾರೆ. ಅವರಿಗೆ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಆದೇಶ ಕೊಡಬಹುದು. ಆದರೆ, ನೀರೇ ಬಳಸಿಕೊಳ್ಳುವುದಿಲ್ಲ ಎನ್ನತಕ್ಕಂಥ ಪ್ರಶ್ನೆ ಬರುವುದಿಲ್ಲ. ನಾಳೆ ನಮಗೆ ಅಲೋಕೇಶನ್ ಆಗಿರುವ ನೀರನ್ನು ಬಳಸಿಕೊಳ್ಳಲಿಲ್ಲವೆಂದರೆ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಒಂದು ಆಕ್ರೋಶ ವ್ಯಕ್ತ ಮಾಡುತ್ತಾರೆ. ಸಹಜ, ಒಂದು ಹಳ್ಳಿ ಮುಳುಗಿದರೆ ಇನ್ನೊಂದು ಹಳ್ಳಿಗೆ ನೀರು ಸಿಗತಕ್ಕಂಥಾದ್ದು, ಈಗ ತಮಗೆ ಗೊತ್ತಿರುವಂತೆ. ಅಲಮಟ್ಟಿ ದೊಡ್ಡ ಜಲಾಶಯ ಮತ್ತು ನಾರಾಯಣಪುರ ಜಲಾಶಯ ನೂರಾರು ಹಳ್ಳಿಗಳು ಮುಳುಗಿವೆ. ನೂರಾರು ಹಳ್ಳಿಗಳಿಗೆ ಲಾಭ ಕೂಡ ಆಗಿದೆ. ಒಂದು ಕಡೆ ಈ ಪ್ರಶ್ನೆ ಇರಲಿ. ನಾನು ಹೇಳುವುದೇನೆಂದರೆ, ಈಗಾಗಲೇ ಉದಾಸಿಯವರು ಹೇಳಿದ ಹಾಗೆ ಹೊಸ ಬ್ಯಾರೇಜುಗಳನ್ನು ಮಾಡಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಮತ್ತು ಯಾವ್ಯಾವ ತಾಲೂಕುಗಳಲ್ಲಿ ನೀರನ್ನು ಹರಿಸಬೇಕೆಂದು ಒಂದು ಸರ್ವೆ ಮಾಡಿದ್ದಾರೋ ಅಥವಾ ಸುಮಾರು1 ಲಕ್ಷ 94 ಸಾವಿರ ಎಕರೆ ಇದರಿಂದ ನೀರಾವರಿಯಾಗುತ್ತದೆಂಬ ಅಂದಾಜು ಏನು ಕೊಟ್ಟಿದ್ದಾರೆ. ಇದು ಸರಿಯಿಲ್ಲವೆಂದರೆ ಖಂಡಿತವಾಗಿಯೂ ನಮ್ಮ ಟೆಕ್ನಿಕಲ್ ಕಮಿಟಿ ಇದೆ. ಆಮೇಲೆ ನಮ್ಮ ಮೇಜರ್ ಇರಿಗೇಶನ್ ಮಾಸ್ಟರ್ ಪ್ಲಾನ್ ಕಂಟ್ರೋಲ್ ಬೋರ್ಡ್ ಇದೆ. ಇವರೆಲ್ಲರೂ ಕೂಡ ಪುನರ್ ಪರಿಶೀಲನೆ ಮಾಡಿ ಯಾವ ರೀತಿಯಲ್ಲಿ ಮುಂದೆ ಸೂಕ್ತ ಕ್ರಮ ಜರುಗಿಸಬೇಕು, ಅದನ್ನು ನಾನು ಪುನರ್ ಪರಿಶೀಲನೆ ಮಾಡಿಸುವುದಕ್ಕೆ ಹೇಳುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ: ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ವಿಷಯ ಹೇಳಬಯಸುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟಿರತಕ್ಕ ಉತ್ತರ, ಈಗ ನಮಗೆ ತಕ್ಷಣ ಬೇಕಾಗಿರತಕ್ಕಂಥದ್ದು ಸರ್ವೆ ಕಾರ್ಯಕ್ಕೆ

57ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದು, ಸರ್ವೆ ಮಾಡುವುದಕ್ಕೆ ಹಳ್ಳಿಹಳ್ಳಿಗೆ ಹೋಗುತ್ತಿರುವುದನ್ನು ಮೊದಲು ನಿಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ, ಅಲ್ಲಿರುವ ಹಳ್ಳಿಯವರೆಲ್ಲರೂ ಕೂಡ ಆತಂಕದಲ್ಲಿದ್ದಾರೆ. ಸರ್ವೆಯರ್‌ಗಳು ಯಾರ್ಯಾರೋ ಬಂದು ಕೇಳಿಕೊಂಡು ಹೋಗಿ ಇಲ್ಲಿ ಸರ್ವೆ ಮಾಡುತ್ತಿದ್ದೇವೆ, ಇವೆಲ್ಲವೂ ಮುಳುಗಡೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಪುನರ್ ಪರಿಶೀಲನೆ ಮಾಡಲಾಗುವುದೆಂಬ ವಾದವನ್ನು ತಾವೇನು ಮಂಡಿಸಿದ್ದೀರಿ. ಈಗ ಮೊದಲು ಸರ್ವೆಯನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ. ಯಾರೂ ಕೂಡ ಹಳ್ಳಿಗಳಿಗೆ ಹೋಗಿ ಆತಂಕದ ವಾತಾವರಣವನ್ನು ಸೃಷ್ಟಿ ಮಾಡುವುದು ಬೇಡ ಮತ್ತು ಈಗಾಗಲೇ ನೀರಾವರಿ ಯೋಜನೆಗಳು ಮಂಜೂರಾತಿಯಾಗಿ ಟೆಂಡರ್ ಆಗಿ ಇದೇ ಜಾಗಗಳಲ್ಲಿಯೇ ಕಾಮಗಾರಿಯನ್ನು ಶುರು ಮಾಡಬೇಕೆಂಬ ನಿಟ್ಟಿನಲ್ಲಿದೆ. ಈಗ ಅದನ್ನು ಮುಳುಗಿಸಿಬಿಟ್ಟು ಮತ್ತೊಂದು ರೀತಿಯಲ್ಲಿ ಮಾಡುವುದೂ ಕೂಡ ಅಷ್ಟೊಂದು ಒಳ್ಳೆಯದಲ್ಲ, ದಯಮಾಡಿ ಈ ಸರ್ವೆ ಕಾರ್ಯಕ್ರಮಕ್ಕೆ 57ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಹಳ್ಳಿಗಳಿಗೆ ಹೋಗತಕ್ಕಂಥ ಕೆಲಸಗಳನ್ನು ಏನು ಮಾಡುತ್ತಿದ್ದಾರೆ. ಅದನ್ನು ತತ್‌ಕ್ಷಣ ವಿತ್‌ಡ್ರಾ ಮಾಡಬೇಕೆಂಬ ವಿನಂತಿ ಮಾಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: 76,850 ಹೆಚ್‌ಪಿ ಮೋಟಾರುಗಳನ್ನು ಕೂರಿಸಬೇಕಾಗುತ್ತದೆ. ಇಷ್ಟೊಂದು ಪ್ರಮಾಣದ ವಿದ್ಯುತ್ ಇವೊತ್ತು ಲಭ್ಯತೆ ಇದೆಯೆಂಬ ಪ್ರಶ್ನೆ ನಮ್ಮೆದುರಿಗಿರಬೇಕಾದರೆ ಇಂತಹ ಯೋಜನೆ ಮಾಡಬೇಕಾದರೂ ಸಹ ಪೂರ್ವಬಾವಿಯಾಗಿ ಚಿಂತನೆ ಮಾಡಬೇಕಾಗಿದೆ. ಮುಂದೆ ನಾವು ಇಷ್ಟೊಂದು ಪ್ರಮಾಣದಲ್ಲಿ ವಿದ್ಯುತ್ ಅನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವೇ ಎನ್ನುವಂತಾದ್ದು. ಇದು ಅಸಾಧ್ಯವಾಗಿರುವ ಸಂದರ್ಭದಲ್ಲಿ ಯೋಜನೆ ಸ್ವಾಭಾವಿಕವಾಗಿ ಕಾರ್ಯಗತವಾಗುವುದಿಲ್ಲ ಎನ್ನುವದು ಮೇಲ್ನೋಟಕ್ಕೆ ಕಂಡು ಬರುತ್ತಿರುವುದರಿಂದ ಇದರ ಸರ್ವೆ ಕಾರ್ಯವನ್ನು ಸದ್ಯಕ್ಕೆ ಕೈಬಿಡದಿದ್ದರೆ, ಅಲ್ಲಿ ಜನರ ತೀವ್ರ ಪ್ರತಿಭಟನೆ ಇದೆ. ಇದಕ್ಕೋಸ್ಕರ, ತಾವು ಅದನ್ನು ಗಮನಿಸುತ್ತೀರಿ ಎಂದು ಮಾನ್ಯ ಕುಮಾರ್ ಬಂಗಾರಪ್ಪನವರು ಹೇಳಿದಂಥ ಮಾತನ್ನು ತಾವು ಮೆಚ್ಚುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಹೇಳಿದ್ದೇನೆ. ಏಕೆಂದರೆ ಎಕನಾಮಿಕಲಿ ಫೀಸಿಬಲ್ ಇದೆಯೇ? ಇಲ್ಲವೇ? ಎಂಬುದನ್ನು ಕೂಡ ನೋಡಬೇಕಾಗುತ್ತದೆ. ಯಾವುದೇ ಒಂದು ಯೋಜನೆ ಬಗ್ಗೆ ಹೇಳಿದ ತಕ್ಷಣ ಅದನ್ನು ಕೈಬಿಡುವುದಕ್ಕಾಗುವುದಿಲ್ಲ, ನೋಡೋಣ, ಅದು ಎಕನಾಮಿಕಲಿ ಫೀಸಿಬಲ್ ಇಲ್ಲವೆಂದರೆ, ಆಟೋಮೆಟಿಕಲಿ ಹೋಗುತ್ತದೆ. ಏಕೆಂದರೆ, ಅಷ್ಟೊಂದು ಹಾರ್ಸ್‌ಪವರ್ ಕೊಟ್ಟು ಖರ್ಚು ಮಾಡಿ, ಅದು ನಮ್ಮ ಪ್ರಾಫಿಟ್‌ಗಿಂತಲೂ ಲುಕ್ಸಾನು ಹೆಚ್ಚಿಗೆ

ಆಗುತ್ತಿದೆಯೆಂದರೆ, ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ.

2. ವಿಷಯ: ಚಿಕ್ಕಮಗಳೂರು ಹಾಗು ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯೊಳಗೆ ಬರುವ 'ಭದ್ರಾ ಮೇಲ್ದಂಡೆ ಯೋಜನೆ' ಯ ಅನುಷ್ಠಾನಕ್ಕಾಗಿ ಸಮೀಕ್ಷಾ ಕಾರ್ಯ ಯಾವ ಭಾಗದಲ್ಲಿ ಕೈಗೊಳ್ಳಲಾಗುತ್ತಿದೆ ಹಾಗೂ ಇದರ ಸಾಧಕ-ಬಾಧಕಗಳ ಸ್ವರೂಪ ವ್ಯಾಪ್ತಿಗಳ ಬಗ್ಗೆ.

ಶ್ರೀ ಎಂ.ಪಿ.ಕುಮಾರ ಸ್ವಾಮಿ (ಮೂಡಿಗೆರೆ):- ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ಹಾಗು ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯೊಳಗೆ ಬರುವ 'ಭದ್ರಾ ಮೇಲ್ದಂಡೆ ಯೋಜನೆಯ' ಯ ಅನುಷ್ಠಾನಕ್ಕಾಗಿ ಸಮೀಕ್ಷಾ ಕಾರ್ಯ ಯಾವ ಭಾಗದಲ್ಲಿ ಕೈಗೊಳ್ಳಲಾಗುತ್ತಿದೆ ಹಾಗೂ ಇದರ ಸಾಧಕ-ಬಾಧಕಗಳ, ಸ್ವರೂಪ, ವ್ಯಾಪ್ತಿಗಳ ಬಗ್ಗೆ ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗು ಸಾರಿಗೆ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಭದ್ರಾ ಮೇಲ್ದಂಡೆ ಯೋಜನೆಯಡಿ (ಉಬ್ರಾಣಿ ಹಾಗೂ ಅಮೃತಾಪುರ ಏತ ನೀರಾವರಿ ಯೋಜನೆಗಳನ್ನು ಒಳಗೊಂಡಂತೆ) 23.00 ಟಿಎಂಸಿ ನೀರಿನ ಬಳಕೆಗಾಗಿ ರೂ.2813.00 ಕೋಟಿಗಳ ಯೋಜನಾ ವರದಿಗೆ ದಿನಾಂಕ 23.8.03ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣದ ಸ್ಕೀಂ-ಎ ಅಡಿಯಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಹಂತ-1ಕ್ಕೆ ರಾಜ್ಯ ಮಾಸ್ಟರ್ ಪ್ಲಾನ್ ಸಮಿತಿಯಿಂದ 23.00 ಟಿಎಂಸಿ ನೀರು ನಿಗದಿಯಾಗಿದೆ. ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆ ಅಭಾವದ ಬರಗಾಲ ಪೀಡಿತ ಪ್ರದೇಶಗಳಿಗೆ ನೀರನ್ನು ಒದಗಿಸುವುದು ಭದ್ರಾ ಮೇಲ್ದಂಡೆ ಯೋಜನೆ ಹಂತ-1ರ ಉದ್ದೇಶವಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಕುರಿತು ಅನೇಕ ಪರ್ಯಾಯಗಳನ್ನು ಪರಿಶೀಲಿಸಿದಂತೆ, ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ತಾಲೂಕಿನ ಮಾಗುಂಡಿ ಗ್ರಾಮದ ಬಳಿ ಭದ್ರಾ ನದಿಗೆ ಅಡ್ಡಲಾಗಿ ಒಂದು ಶೇಖರಣಾ ಜಲಾಶಯವನ್ನು ಹಾಗೂ ಬೆಳನಗಿ ಗ್ರಾಮದ ತೇಗೂರು ಗುಡ್ಡ ಎಂಬಲ್ಲಿ ಮತ್ತೊಂದು ಜಲಾಶಯವನ್ನು ನಿರ್ಮಿಸಿ, ಅಲ್ಲಿಂದ ಎರಡು ಹಂತದಲ್ಲಿ ಪಂಪ್‌ಗಳ ಮೂಲಕ ನೀರನ್ನೆತ್ತಿ ಸುಮಾರು 265 ಕಿ.ಮೀ.ಉದ್ದದ (ಸುಮಾರು 4.85 ಕಿ.ಮೀ.ಉದ್ದ ಸುರಂಗ ಮಾರ್ಗವನ್ನು ಸೇರಿದಂತೆ) ಕಾಲುವೆಯ ಮೂಲಕ ಹರಿಸಿ ಸುಮಾರು ಒಂದು ಲಕ್ಷ ಹೆಕ್ಟೇರ್‌ಗೂ ಮೇಲ್ಪಟ್ಟ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.

ಈ ಯೋಜನೆಗೆ ಬೇಕಾಗುವ ಸುಮಾರು 8,500 ಎಕರೆ ಪ್ರದೇಶದಲ್ಲಿ ಭದ್ರಾ ಅಭಯಾರಣ್ಯದ ಪ್ರದೇಶವೂ ಇರುವುದರಿಂದ, ಸದರಿ ಪ್ರದೇಶದಲ್ಲಿ ಸರ್ವೆ